**APRIL 06, 2024**

**ALL INDIA RADIO- DHARWAD**

**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ–ಪ್ರದೇಶ ಸಮಾಚಾರ**

<><><>

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಲೋಕಸಭಾ ಚುನಾವಣೆ, 2ನೇ ಹಂತದ ನಾಮಪತ್ರ ಸಲ್ಲಿಕೆ, ಇದೇ 12 ರಿಂದ, ಆರಂಭ.**
- **ಮರೆಯದೇ ಮತ ಚಲಾಯಿಸಿರಿ; ದೇಶದ ಹೆಮ್ಮೆಯ ಪಾಲುದಾರರಾಗಿರಿ, ಎಂಬ ಧ್ಯೇಯದೊಂದಿಗೆ, ವಿಶೇಷ ಸ್ವೀಪ್ ಚಟುವಟಿಕೆ.**
- **ಕಿತ್ತೂರು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕದ, ಹಲವು ಜಿಲ್ಲೆಗಳಲ್ಲಿ ಬರ ಪರಿಸ್ಥಿತಿ; ಬಿಸಿಲಿಗೆ ಬಸವಳಿದ ಜನತೆ.**
- **ಕಾರವಾರದ ವಾಣಿಜ್ಯ ಬಂದರು; 'ಸಾಗರಮಾಲಾ' ಯೋಜನೆಯಡಿ, ಐದು ಹಂತಗಳಲ್ಲಿ ಅಭಿವೃದ್ಧಿ – ಜಯರಾಮ ರಾಯಪುರ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯದ 2ನೇ ಹಂತದ, 18ನೇ ಲೋಕಸಭೆ ಸಾರ್ವತ್ರಿಕ ಚುನಾವಣೆಗೆ, ಇದೇ 12ನೇ ತಾರೀಖಿನಿಂದ ನಾಮಪತ್ರ ಸಲ್ಲಿಕೆ ಆರಂಭವಾಗಲಿದೆ. ಅಭ್ಯರ್ಥಿಗಳು ಖುದ್ದಾಗಿ ನಾಮಪತ್ರ ಸಲ್ಲಿಸಬಹುದು ಅಥವಾ ಕೇಂದ್ರ ಚುನಾವಣಾ ಆಯೋಗದ ಸುವಿಧಾ ಅಪ್ಲಿಕೇಷನ್ ಮೂಲಕ, ಆನ್ಲೈನ್ ನಲ್ಲಿ ಸಹ ನಾಮಪತ್ರ ಸಲ್ಲಿಸಬಹುದು. ಹಾವೇರಿ ಜಿಲ್ಲಾಧಿಕಾರಿ ರಘುನಂದನ್ ಮೂರ್ತಿ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.**

<><><>

**ಜಿಲ್ಲಾಧಿಕಾರಿ ರಘುನಂದನ್ ಮೂರ್ತಿ ಧ್ವನಿ 35 ಸೆಕೆಂದುಗಳು**

<><><>

ಮೊದಲ ಹಂತದಲ್ಲಿ, ದಕ್ಷಿಣ ಕರ್ನಾಟಕ ಭಾಗದ, 14 ಲೋಕಸಭಾ ಕ್ಷೇತ್ರಗಳಿಗೆ ನಡೆಯುವ ಚುನಾವಣೆಗೆ ಸಲ್ಲಿಕೆಯಾಗಿರುವ ನಾಮಪತ್ರಗಳನ್ನು ಚುನಾವಣಾಧಿಕಾರಿಗಳು ಪರಿಶೀಲಿಸಿದರು. 14 ಕ್ಷೇತ್ರಗಳಿಂದ, ಒಟ್ಟು 358 ಅಭ್ಯರ್ಥಿಗಳು, 492 ನಾಮಪತ್ರಗಳನ್ನು ಸಲ್ಲಿಸಿದ್ದಾರೆ. ನಾಮಪತ್ರ ಸಲ್ಲಿಕೆಯಲ್ಲಿ ಪುರುಷ ಅಭ್ಯರ್ಥಿಗಳು ಮೇಲುಗೈ ಸಾಧಿಸಿದ್ದು, 333 ಮಂದಿ ತಮ್ಮ ಉಮೇದುವಾರಿಕೆಗೆ ಅರ್ಜಿ ಸಲ್ಲಿಸಿದ್ದಾರೆ. ಜೊತೆಗೆ 25 ಮಂದಿ ಮಹಿಳಾ ಅಭ್ಯರ್ಥಿಗಳು ಸ್ಪರ್ಧಿಸುವ ಇಚ್ಛೆ ವ್ಯಕ್ತಪಡಿಸಿದ್ದಾರೆ. ನಿನ್ನೆ ನಾಮಪತ್ರಗಳ ಪರಿಶೀಲನೆ ನಡೆದಿದ್ದು, ಸೂಕ್ತ ದಾಖಲಾತಿಗಳಿಲ್ಲದ ನಾಮಪತ್ರಗಳನ್ನು ಅಧಿಕಾರಿಗಳು ತಿರಸ್ಕರಿಸಿದ್ದಾರೆ.

<><><>

ಭಾರತೀಯ ಚುನಾವಣಾ ಆಯೋಗ, ಸ್ವೀಪ್ ಕಾರ್ಯಕ್ರಮದಡಿ, ಶತಾಯುಷಿ ಮತದಾರರ ಸಾಲಿನಲ್ಲಿ, ಖ್ಯಾತ ನಿಘಂಟು ತಜ್ಞ, ಪ್ರೊಫೆಸರ್ ಜಿ.ವೆಂಕಟಸುಬ್ಬಯ್ಯ ಅವರನ್ನು ಹೆಸರಿಸಿದೆ. ಪ್ರೊಫೆಸರ್ ಜಿ.ವೆಂಕಟಸುಬ್ಬಯ್ಯ ಅವರು ತಮ್ಮ ಜೀವಿತ ಅವಧಿಯಲ್ಲಿ, ಯಾವುದೇ ಚುನಾವಣೆಯ ಮತದಾನದಿಂದಲೂ ತಪ್ಪಿಸಿಕೊಂಡಿಲ್ಲ. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರೂ ಮುಖ್ಯವಾಗಿದ್ದು, ಪ್ರತಿ ಮತವೂ ಸಮಾನವಾಗಿದೆ. ಎಲ್ಲರೂ ತಪ್ಪದೇ ಮತ ಚಲಾಯಿಸಬೇಕು ಎಂದು, ಆಯೋಗ ಮನವಿ ಮಾಡಿದೆ.

<><><>

ಚಿತ್ರದುರ್ಗದ ಕ್ರೀಡಾಂಗಣ ಮುಂಭಾಗದಲ್ಲಿ, ಜಿಲ್ಲಾ ಸ್ವೀಪ್ ಸಮಿತಿ ಆಯೋಜಿಸಿದ್ದ, ಮತದಾರ ಜಾಗ್ರತಿ ಕಾರ್ಯಕ್ರಮದಲ್ಲಿ, ರಂಗೋಲಿ ಸ್ಪರ್ಧೆ ಯುವ ಜನರ ಮನ ಸೆಳೆಯಿತು.

<><><>

ಲೋಕಸಭಾ ಚುನಾವಣೆ ಹಿನ್ನೆಲೆ, ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಪ್ರಣಾಳಿಕೆ ಪತ್ರವನ್ನು ದಿಲ್ಲಿಯಲ್ಲಿ ಬಿಡುಗಡೆ ಮಾಡಿದರು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ರಾಜ್ಯದ ಮೈಸೂರು, ಶಿವಮೊಗ್ಗ, ಬೆಳಗಾವಿ ಹಾಗೂ ಉಡುಪಿಯ, ಬೂತ್ ಮಟ್ಟದ ಬಿಜೆಪಿ ಕಾರ್ಯಕರ್ತರ ಜೊತೆ, ನಮೋ ಆ್ಯಪ್ ಮೂಲಕ ಸಂವಾದ ನಡೆಸಿದರು.

<><><>

"ಚುನಾವಣಾ ಪರ್ವ, ದೇಶದ ಗರ್ವ; ಮರೆಯದೇ ಮತ ಚಲಾಯಿಸಿರಿ, ದೇಶದ ಹೆಮ್ಮೆಯ ಪಾಲುದಾರರಾಗಿರಿ" ಎಂಬ ಧ್ಯೇಯದೊಂದಿಗೆ, ಶಿವಮೊಗ್ಗ ಜಿಲ್ಲಾಡಳಿತ, ವಿಶೇಷ ಸ್ವೀಪ್ ಚಟುವಟಿಕೆ ಮೂಲಕ, ಯುವ ಮತದಾರರ ಗಮನ ಸೆಳೆಯುತ್ತಿದೆ.

ಜಿಲ್ಲಾಧಿಕಾರಿ ಗುರುದತ್ತ ಹೆಗಡೆ, ಕಡ್ಡಾಯ ಮತದಾನಕ್ಕೆ ಯುವ ಜನತೆಗೆ ಮನವಿ ಮಾಡಿದ್ದಾರೆ.

<><><>

ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಧ್ವನಿ 25 ಸೆಕೆಂದುಗಳು

<><><>

ಗ್ರಾಮೀಣ ಭಾಗದ ಮತದಾರರಲ್ಲಿ, ಕಡ್ಡಾಯ ಮತದಾನದ ಬಗ್ಗೆ, ಮಹಿಳಾ ಸ್ವಸಹಾಯ ಸಂಘಗಳ ಕಾರ್ಯಕರ್ತೆಯರು, ಜಾಗೃತಿ ಮೂಡಿಸಿ, ಲೋಕಸಭಾ ಚುನಾವಣೆಯಲ್ಲಿ, ಮತದಾನದ ಹೆಚ್ಚಳಕ್ಕೆ ಶ್ರಮವಹಿಸುವಂತೆ, ಗದಗ ಜಿಲ್ಲೆ ಸ್ವೀಪ್ ಸಮಿತಿ ನೋಡಲ್ ಅಧಿಕಾರಿ, ಸಿ.ಬಿ.ದೇವರಮನಿ, ನರಗುಂದದಲ್ಲಿ ತಿಳಿಸಿದ್ದಾರೆ.

<><><>

ಯಾದಗಿರಿ ಜಿಲ್ಲೆಯ ಸುರಪುರ ಪರಿಶಿಷ್ಟ ಮೀಸಲು ವಿಧಾನಸಭೆ ಕ್ಷೇತ್ರದ ಉಪ ಚುನಾವಣೆ; ಮತ್ತು ರಾಯಚೂರು ಲೋಕಸಭಾ ಚುನಾವಣೆಯನ್ನು, ಯಶಸ್ವಿಗೊಳಿಸಲು, ತಾಲೂಕು ಆಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ ಎಂದು, ಚುನಾವಣಾಧಿಕಾರಿ ಕಾವ್ಯಾ ರಾಣಿ ಹೇಳಿದ್ದಾರೆ.

<><><>

ಲೋಕಸಭಾ ಸಾರ್ವತ್ರಿಕ ಚುನಾವಣೆಗೆ ಸಂಬಂಧಿಸಿ, ಎಪಿಕ್ ಕಾರ್ಡ್ ಮತ್ತು ಚುನಾವಣೆ ಕುರಿತ ಸಾರ್ವಜನಿಕರ ಸಂದೇಹಗಳನ್ನು ಪರಿಹರಿಸಲು, ಉಚಿತ ಸಹಾಯವಾಣಿ **1-9-5-0** ನ್ನು ಸಾರ್ವಜನಿಕರು ಬಳಸಬಹುದು.

<><><>

ಕಳೆದ ಲೋಕಸಭಾ ಚುನಾವಣೆಯಲ್ಲಿ, ಮಂಡ್ಯ ಜಿಲ್ಲೆಯಿಂದ ಪಕ್ಷೇತರ ಅಭ್ಯರ್ಥಿಯಾಗಿ ಗೆದ್ದಿದ್ದ, ಸುಮಲತಾ ಅಂಬರೀಶ್ ಬಿಜೆಪಿ ಪಕ್ಷ ಸೇರಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕಲ್ಯಾಣ ಕರ್ನಾಟಕದ ವಿಜಯನಗರ ಜಿಲ್ಲೆಯ **6** ತಾಲೂಕುಗಳನ್ನು, ರಾಜ್ಯ ಸರ್ಕಾರ ತೀವ್ರ ಬರಪೀಡಿತ ಎಂದು ಘೋಷಿಸಿದ್ದಾಗಿ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದ್ದಾರೆ. ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಬರ ಪರಿಹಾರ ಚಟುವಟಿಕೆಗಳಿಗೆ ಒತ್ತು ನೀಡಲಾಗಿದೆ ಎಂದು ಆಕಾಶವಾಣಿಗೆ ಮಾಹಿತಿ ನೀಡಿದ್ದಾರೆ.

<><><>

ಬಳ್ಳಾರಿ ಜಿಲ್ಲೆಯಾದ್ಯಂತ ಪ್ರಖರ ಬಿಸಿಲಿನ ಹಿನ್ನೆಲೆ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ, ಆರೋಗ್ಯ ಇಲಾಖೆ ಸಹಕಾರದಲ್ಲಿ, ನಿರ್ಜಲೀಕರಣ ತಡೆಗಟ್ಟಲು, ತುರ್ತು ಚಿಕಿತ್ಸಾ ಕೇಂದ್ರಗಳಲ್ಲಿ, ಓ.ಆರ್.ಎಸ್. ಜೀವ ಜಲವನ್ನು ಸಿದ್ಧಪಡಿಸಿ, ಒದಗಿಸುತ್ತಿದೆ ಎಂದು, ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ವೈ.ರಮೇಶ್ ಬಾಬು ತಿಳಿಸಿದ್ದಾರೆ.

<><><>

ಧಾರವಾಡ ಜಿಲ್ಲೆಯನ್ನು ಬರ ಪೀಡಿತ ಎಂದು ರಾಜ್ಯ ಸರ್ಕಾರ ಘೋಷಿಸಿದ ಹಿನ್ನೆಲೆ, **8** ತಾಲೂಕುಗಳಲ್ಲಿ ಬರ ಪರಿಹಾರ ಕಾಮಗಾರಿಯನ್ನು ಜಿಲ್ಲಾಡಳಿತ, ಸಮರೋಪಾದಿಯಲ್ಲಿ ಕೈಗೊಂಡಿದೆ. ಬರದಿಂದ ಬಸವಳಿದಿರುವ ಕೃಷಿಕರಲ್ಲಿ ಆತ್ಮ ವಿಶ್ವಾಸ ಮೂಡಿಸಲು, 'ರೈತರೊಂದಿಗೆ ನಾವು' ಎಂಬ ವಿನೂತನ ಯೋಜನೆ ಮೂಲಕ, ಧಾರವಾಡ ಜಿಲ್ಲಾಡಳಿತ ಗಮನ ಸೆಳೆದಿದೆ. ಪ್ರದೇಶ ಸಮಾಚಾರಕ್ಕಾಗಿ ಬರ ಪರಿಹಾರ ಕುರಿತು ಮಾಹಿತಿ ನೀಡಿದ್ದಾರೆ ಜಿಲ್ಲಾಧಿಕಾರಿ ದಿವ್ಯಾ ಪ್ರಭು.

<><><>

ಜಿಲ್ಲಾಧಿಕಾರಿ ದಿವ್ಯಾ ಪ್ರಭು ಧ್ವನಿ **45** ಸೆಕೆಂದುಗಳು

<><><>

ಬರ ಪರಿಸ್ಥಿತಿ ಉಲ್ಬಣಿಸುತ್ತಿದ್ದು, ಮೈಸೂರು ಜಿಲ್ಲೆಯ 108 ಹಳ್ಳಿಗಳಲ್ಲಿ, ಕುಡಿಯುವ ನೀರಿನ ಅಭಾವ ಕಂಡುಬಂದಿದೆ. ಜೊತೆಗೆ ಒಂದು ಕಾಲರಾ ಪ್ರಕರಣ ಪತ್ತೆಯಾಗಿದೆ ಎಂದು ಜಿಲ್ಲಾಧಿಕಾರಿ ಡಾಕ್ಟರ್ ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

<><><>

ಬಿಸಿಲಿನ ಉಷ್ಣಾಘಾತದಿಂದ ಪಾರಾಗಲು, ಆಹಾರ ಪದ್ಧತಿ ಬದಲಾಯಿಸುವುದು ಅವಶ್ಯವಾಗಿದೆ ಎಂದು, ಬಾಗಲಕೋಟೆ ಜಿಲ್ಲೆ ಆಯುಷ್ ಅಧಿಕಾರಿ ಅಕ್ಕಮಹಾದೇವಿ ಗಾಣಿಗೇರ ಹೇಳಿದ್ದಾರೆ. ಬೇಸಿಗೆ ದಿನಗಳಲ್ಲಿ ಪಿತ್ತದೋಷವು ಹೆಚ್ಚುತ್ತಿದ್ದು, ಇದರಿಂದ ಚರ್ಮದ ಸಮಸ್ಯೆಗಳು, ಅಜೀರ್ಣ, ಆಯಾಸ ಇತ್ಯಾದಿ ಜೀರ್ಣ ಕ್ರಿಯೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಕಾರಣವಾಗುತ್ತದೆ. ತಾಜಾ ಹಣ್ಣಿನ ರಸ ಹಾಗೂ ಶುದ್ಧ ನೀರು ಕುಡಿಯುವಂತೆ ಸಲಹೆ ಮಾಡಿದ್ದಾರೆ.

<><><>

ವಿಜಯಪುರ, ಬೆಳಗಾವಿ, ಧಾರವಾಡ, ಬೀದರ್, ಬೆಂಗಳೂರು ನಗರ ಹಾಗೂ ಗ್ರಾಮಾಂತರ ಪ್ರದೇಶ, ದಾವಣಗೆರೆ, ಕೋಲಾರ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ, 2 ರಿಂದ 3 ಡಿಗ್ರಿ ಸೆಲ್ಸಿಯಸ್ ತಾಪಮಾನ ಇಂದು ಮತ್ತು ನಾಳೆ, ಏರಿಕೆಯಾಗುವ ಸಾಧ್ಯತೆ ಇದೆ ಎಂದು, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

<><><>

ಕಲಬುರಗಿಯಲ್ಲಿ ನಿನ್ನೆ, ಗರಿಷ್ಠ ಉಷ್ಣಾಂಶ 42 ದಶಾಂಶ 8 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

<><><>

ಕಾರವಾರದ ವಾಣಿಜ್ಯ ಬಂದರು ಭವಿಷ್ಯದ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ; 'ಸಾಗರಮಾಲಾ' ಯೋಜನೆಯಡಿ, ಐದು ಹಂತಗಳಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದು, ಜಲ ಸಾರಿಗೆ ಮಂಡಳಿ ಸಿ.ಇ.ಓ., ಜಯರಾಮ ರಾಯಪುರ ಹೇಳಿದ್ದಾರೆ. ಉತ್ತರಕನ್ನಡ ಜಿಲ್ಲೆ, ಕಾರವಾರದಲ್ಲಿ 61ನೇ ರಾಷ್ಟ್ರೀಯ ಜಲ ಸಾರಿಗೆ ದಿನಾಚರಣೆಗೆ ಚಾಲನೆ ನೀಡಿ, ಅವರು ಮಾತನಾಡಿದರು. ಭಾರತೀಯ ನೌಕಾ ಪಡೆಯ, ಫ್ಲ್ಯಾಗ್ ಆಫಿಸರ್ ಕಮಾಂಡಿಂಗ್, ರಿಯರ್ ಅಡ್ಮಿರಲ್ ಕೆ.ಎಂ.ರಾಮಕೃಷ್ಣ, ಕಮೋಡೊರ್ ಆಶೀಶ್ ಗೋಯಲ್ ಪಾಲ್ಗೊಂಡಿದ್ದರು.

<><><>

ಕೊಡಗು ಜಿಲ್ಲೆ ನಾಪೋಕ್ಲು, ಚೆರಿಯಾ ಪರಂಬುವಿನಲ್ಲಿ ನಡೆಯುತ್ತಿರುವ, ಕೊಡವ ಕೌಟುಂಬಿಕ ಹಾಕಿ ಟೂರ್ನಿ, ಕುಂಡ್ಯೋಳಂಡ ಕಪ್‌ನಲ್ಲಿ, ಕೋಳೆರ್ ತಂಡದ ವಿರುದ್ಧ ಕರವಂಡ ತಂಡ, 4-3 ಗೋಲುಗಳ ಅಂತರದಿಂದ ರೋಚಕ ಗೆಲುವು ದಾಖಲಿಸಿತು. ಪೆನಾಲ್ಟಿ ಶೂಟ್ ಔಟ್ ಅವಕಾಶವನ್ನು ಸದುಪಯೋಗ ಪಡಿಸಿಕೊಂಡ, ಕರವಂಡ ತಂಡ ಗೆಲುವು ಸಾಧಿಸಿತು. ಕೋಳೆರ್ ತಂಡದ ಹೃತಿಕ್ ಹ್ಯಾಟ್ರಿಕ್ ಗೋಲು ದಾಖಲಿಸಿದರೂ, ಗೆಲುವು ಕರವಂಡ ತಂಡಕ್ಕೆ ಒಲಿಯಿತು.

<><><>

ಟೊರ್‍ಯಾಂಟೊದಲ್ಲಿ ಆಯೋಜಿತ, ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಮೊದಲ ಸುತ್ತಿನಲ್ಲಿ, ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್.ಪ್ರಜ್ಞಾನಂದ, ಫ್ರಾನ್ಸ್‌ನ ಅಲಿರೇಝಾ ಫಿರೋಜ್ ಎದುರು ಡ್ರಾ ಮಾಡಿಕೊಂಡರು. ಇನ್ನೊಂದು ಪಂದ್ಯದಲ್ಲಿ ಡಿ.ಗುಕೇಶ್, ವಿದಿತ್ ಎಸ್.ಗುಜರಾತಿ ಜೊತೆ ಪಾಯಿಂಟ್ ಹಂಚಿಕೊಂಡರು. ಭಾರತದ ಆರ್.ವೈಶಾಲಿ ಮತ್ತು ಕೊನೇರು ಹಂಪಿ, ತಮ್ಮ ನಡುವಣ ಪಂದ್ಯವನ್ನು 41 ನಡೆಗಳ ನಂತರ ಡ್ರಾ ಮಾಡಿಕೊಂಡು, ತಲಾ ಅರ್ಧ ಪಾಯಿಂಟ್ ಪಡೆದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಹಸಿರು ಕ್ರಾಂತಿಯ ಹರಿಕಾರ, ಮಾಜಿ ಉಪ ಪ್ರಧಾನಮಂತ್ರಿ, ಬಾಬು ಜಗಜೀವನ ರಾಂ ಅವರ 117ನೇ ಜಯಂತಿಯನ್ನು, ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಾಂಕೇತಿಕವಾಗಿ ಆಚರಿಸಿದ ವರದಿಗಳು ಬಂದಿವೆ.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ವಿಧಾನಸೌಧದಲ್ಲಿರುವ ಬಾಬು ಜಗಜೀವನ್ ರಾಮ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಗೌರವಾರ್ಪಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಲೋಕಸಭಾ ಚುನಾವಣೆ, 2ನೇ ಹಂತದ ನಾಮಪತ್ರ ಸಲ್ಲಿಕೆ, ಇದೇ 12 ರಿಂದ, ಆರಂಭ.
- ಮರೆಯದೇ ಮತ ಚಲಾಯಿಸಿರಿ; ದೇಶದ ಹೆಮ್ಮೆಯ ಪಾಲುದಾರರಾಗಿರಿ, ಎಂಬ ಧ್ಯೇಯದೊಂದಿಗೆ, ವಿಶೇಷ ಸ್ವೀಪ್ ಚಟುವಟಿಕೆ.
- ಕಿತ್ತೂರು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕದ, ಹಲವು ಜಿಲ್ಲೆಗಳಲ್ಲಿ ಬರ ಪರಿಸ್ಥಿತಿ; ಬಿಸಿಲಿಗೆ ಬಸವಳಿದ ಜನತೆ.
- ಕಾರವಾರದ ವಾಣಿಜ್ಯ ಬಂದರು; 'ಸಾಗರಮಾಲಾ' ಯೋಜನೆಯಡಿ, ಐದು ಹಂತಗಳಲ್ಲಿ ಅಭಿವೃದ್ಧಿ – ಜಯರಾಮ ರಾಯಪುರ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ